

ಗಂಡು ಚಿರತೆಯೊಂದು ಹಾರಿ ಹಳ್ಳದ ಕಡೆಗೆ ಓಡಿತು. ಆಗ ನಾವು ಇದು ಚಿರತೆಗಳ ಬೇಟೆಯೇ ಹೌದೆಂದು ನಿರ್ಣಯಿಸಿಕೊಂಡೆವು.

ಆದರೆ, ಇಷ್ಟು ದೊಡ್ಡ ಕಾಡೆಮ್ಮೆಯನ್ನು ಚಿರತೆಗಳು ಹೇಗೆ ಹೊಡೆಯಲು ಸಾಧ್ಯ? ಎಂಬ ತಾಂತ್ರಿಕ ಪ್ರಶ್ನೆ ಉದ್ಭವಿಸಿತು. ಆಗ ಮಂಜು 'ಇದ್ದರೂ ಇರಬಹುದು ಸರ್. ಮೇಟಿಂಗ್ ಟೈಮಲ್ಲಿ ಚಿರತೆಗಳು ಎಂಥ ಸಾಹಸ ಬೇಕಾದರೂ ಮಾಡುತ್ತವೆ' ಎಂದ. ಆಗ ನಾನು 'ಅಲ್ಲ ಕಣೋ ಅಷ್ಟು ದೊಡ್ಡ ಪ್ರಾಣಿಯನ್ನು ಚಿರತೆಗಳು ಹೊಡೆಯೋಕೆ ಸಾಧ್ಯನಾ? ಒಂದು ವೇಳೆ ಎಮ್ಮೆ ಏನಾದರೂ ತಿರುಗಿ ನಿಂತು ಕೋಡಿನಲ್ಲಿ ತಿವಿದರೆ ಚಿರತೆಗಳ ಹೊಟ್ಟೆ ಸೀಳಿ ಬೋಟಿಕಲೀಜ ಈಚೆ ಬರೋದಿಲ್ಲವಾ? ಈನಾಡಿ ದೊಡ್ಡ ಗಂಡು ಕಾಡೆಮ್ಮೆನ ಚಿರತೆಗಳು ಹೊಡೆದಿದ್ದಾವೆ ಅನ್ನೋದು ನನಗ್ಯಾಕೋ ಅನುಮಾನ. ಇದು ಹುಲೀದೆ ಕೆಲಸ' ಎಂದೆ.

ಅವನೂ ಆಲೋಚಿಸಿ 'ಹುಲಿಯಾಗಿದ್ದಿದ್ದರೆ ನೇರ ಕುತ್ಗೆ ಕೆಳಗೇ ಬಾಯಾಕುತ್ತೆ. ಇಲ್ಲಿ ನೋಡಿದ್ರೆ ಅಟ್ಯಾಕ್ ಕಾಡೆಮ್ಮೆಗೆ ಹಿಂದ್ಗಡೆಯಿಂದ ಆಗಿರೋ ಥರ ಕಾಣಿಸ್ತಾ ಇದೆ. ಹಿಂದಿನ ಒಂದು ತೊಡೆ ಆಗ್ಲೆ ಮುಗಿಸಿ ಹಾಕಿವೆ. ಮುಂದುಗಡೆ ಮುಖ ನೋಡಿ ಏನೇನೂ ಆಗಿಲ್ಲ. ಕುತಂತ್ರವಾಗಿ ಹಿಂದೆ ಬಂದು ಬೇಟೆ ಆಡೋದ್ರಲ್ಲಿ ಚಿರತೇನೆ ಮುಂದು. ಹುಲಿ ತರ ಕಾಡೆಮ್ಮೆನ ಎದುರಿಸೋ ಶಕ್ತಿ ಅದಕ್ಕೆ ನೀವು ಹೇಳಿದಂಗೆ ಇಲ್ಲ ಬಿಡಿ. ಎರಡು ಚಿರತೇನೂ ಒಟ್ಟಿಗೆ ಧಾಳಿ ಮಾಡಿರಬಹುದು ಎಂದ. ನಮ್ಮ ಈ ವಾದ ತರ್ಕಗಳು ನಮಗಷ್ಟೇ ತೃಪ್ತಿ ಕೊಡಬಲ್ಲವಾಗಿದದ್ದು. ಅಸಲಿಗೆ ಇಲ್ಲಿ ಕೊಂದವರು ಯಾರೆಂದು ಗೊತ್ತಾಗದೆ ಅಲ್ಲೇ ಕಾವಲಿಗೆ ಇದ್ದ ಎರಡೂ ಚಿರತೆಗಳ ಚಿತ್ರಗಳನ್ನೇ ಎರಡು ದಿನ ಓಡಾಡಿ ತೆಗೆದೆವು. ಅಲ್ಲಲ್ಲಿ ಓಡಾಡುತ್ತಾ, ಮರದ ಮೇಲೆ ಕೂತು ವಿಶ್ರಾಂತಿ ಪಡೆಯುತ್ತಾ, ಹಸಿವಾದಾಗ ಬಂದು ಕಾಡೆಮ್ಮೆಯನ್ನು